ಆದರೆ ಅವನು ಸಂನ್ಯಾಸಿಗಳಂತೆ ಕಾವಿ ಧರಿಸಿರಲಿಲ್ಲ. ಮಾನ ಮುಚ್ಚಲು ಬೇಕಾದ ಒಂದು ಸಣ್ಣ ಕೌಪೀನ ಇತ್ತು ಅಷ್ಟೆ. ಕೈಯ್ಯಲ್ಲಿ ನಾಗರಹಾವಿನಂತೆ ವಿನ್ಯಾಸ ಇರುವ ಒಂದು ಬೆತ್ತದ ಕೋಲಿತ್ತು. ಆ ಕೋಲಿನ ತುಂಬ ವಿವಿಧ ಪ್ರಾಣಿಗಳ ಚಿತ್ರಗಳಿದ್ದವು. ಅರಮನೆಯ ಮುಂಭಾಗಕ್ಕೆ ಬಂದವನೆ ವಿಚಿತ್ರವಾಗಿ ಸದ್ದು ಮಾಡುತ್ತಾ ಒಳನುಗ್ಗಲು ಪ್ರಯತ್ನಿಸಿದ. ಆದರೆ ಕಾವಲುಗಾರರು ಅವನನ್ನು ತಡೆದು, 'ಯಾರು ನೀನು?' ಎಂದು ಪ್ರಶ್ನಿಸಿದರು. ಅವನು ಮಾತಾಡಲಿಲ್ಲ. ಬದಲಾಗಿ ಜೋರಾಗಿ ನಕ್ಕ. ಅವನು ನಕ್ಕಿದ್ದೇ ತಡ ಒಂದು ರೀತಿಯ ಬಿರುಗಾಳಿ ಹುಟ್ಟಿ ಅರಮನೆಯ ಸುತ್ತ ವ್ಯಾಪಿಸಿಬಿಟ್ಟಿತು. ಅರಮನೆಯ ಮೇಲ್ಭಾಗದ ಕಾವಲು ಗೋಪುರದ ಘಂಟೆಗಳು ಸದ್ದು ಮಾಡತೊಡಗಿದವು. ಅರಮನೆಯ ಒಳಭಾಗದಲ್ಲಿ ಅಲ್ಲಲ್ಲಿ ಇಟ್ಟಿದ್ದ ಚಿನ್ನದ ಕುಸುರಿಯ ಹೂ ಕುಂಡಗಳು ಕೆಳಗೆ ಬಿದ್ದವು. ರಾಜ ಪರಿವಾರದವರು ಒಣಗಲು ಹಾಕಿದ್ದ ಉಡುಪುಗಳು ಬಿರುಗಾಳಿಯ ಹೊಡೆತಕ್ಕೆ ಸಿಕ್ಕು ಹಾರಾಡಿದವು. ಈ ಎಲ್ಲ ಚಮತ್ಕಾರವನ್ನು ನೋಡಿ ಕಾವಲುಗಾರರು ಬೆರಗಾದರು. ರಾಜನ ಬಳಿ ಕುಳಿತಿದ್ದ ಮಂತ್ರಿ ಅರಮನೆಯ ದ್ವಾರಕ್ಕೆ ಓಡೋಡಿ ಬಂದ. ಆ ವಿಚಿತ್ರ ವ್ಯಕ್ತಿಯನ್ನು ನೋಡಿದ ಮಂತ್ರಿಯೂ ಅಧಿಕಾರವಾಣಿಯಲ್ಲಿ, 'ಯಾರು ನೀನು?' ಎಂದ. ಆ ಮನುಷ್ಯ ಮತ್ತೊಮ್ಮೆ ಜೋರಾಗಿ ನಕ್ಕ. ಈಗ ಅವನ ಬಾಯಿಂದ ಹತ್ತಾರು ಗಿಳಿಗಳು, ನೂರಾರು ದುಂಬಿಗಳು, ಸಾವಿರಾರು ಪತಂಗಗಳು ಗುಂಪುಗುಂಪಾಗಿ ಹೊರಬಂದವು. ಬಿರುಗಾಳಿ ನಿಂತು ಕ್ಷಣ ಮಾತ್ರದಲ್ಲಿ ತಂಗಾಳಿ ಆವರಿಸಿತು. ಅರಮನೆ ತುಂಬ ಹಕ್ಕಿ, ಪಕ್ಷಿ, ದುಂಬಿ, ಪತಂಗ ಹಾರತೊಡಗಿದವು. ಬಂದಿರುವ ಮನುಷ್ಯ ಯಾವುದಕ್ಕೂ ಉತ್ತರ ಕೊಡದೆ ಬರೀ ಚಮತ್ಕಾರ ಮಾಡುತ್ತಿರುವುದನ್ನು ಕಂಡು ಮಂತ್ರಿಗೆ ಸಿಟ್ಟು ಬಂತು. ಇವನ್ಯಾರೋ ಯಕ್ಷಿಣಿ ವಿದ್ಯೆ ಕಲಿತ ಮೋಸಗಾರ ಎಂದು ಭಾವಿಸಿ ತನ್ನ ದಂಡದಿಂದ ಆ ವಿಚಿತ್ರ ಮನುಷ್ಯನ ಕುತ್ತಿಗೆಗೆ ಹೊಡೆದ. ಮಂತ್ರಿ ಕೊಟ್ಟ ಏಟಿಗೆ ವಿಚಲಿತಗೊಳ್ಳದ ಆತ ತನ್ನ ಬಾಯನ್ನು ಅಗಲವಾಗಿ ತೆರೆದ. ಕ್ಷಣ ಮಾತ್ರದಲ್ಲಿ ಆ ಎಲ್ಲ ದುಂಬಿ, ಪತಂಗ, ಗಿಳಿಗಳೂ ಅವನ ಹೊಟ್ಟೆ ಸೇರಿದವು. ಮಂತ್ರಿ ಉರಿಗಣ್ಣಿನಿಂದ ನೋಡುತ್ತಲೇ ಮತ್ತೊಂದು ಏಟು ಕೊಟ್ಟ. ಆಗ ಆ ಮನುಷ್ಯ, 'ಅಯ್ಯೋ' ಎಂದು ಮತ್ತೊಮ್ಮೆ ಬಾಯಿತೆರೆದ. ಈಗ ಅವನ ಬಾಯಿಂದ ಧಗಧಗಿಸುವ ಬೆಂಕಿಯ ಉಂಡೆಗಳೇ ಉರುಳಿ ಬಂದವು. ಆ ಬೆಂಕಿಯ ಉಂಡೆಗಳು ಅರಮನೆಯ ಒಳಗೆ ನುಗ್ಗತೊಡಗಿದವು. ಇಡೀ ಅರಮನೆ ಶಾಖದಿಂದ ಬೇಯತೊಡಗಿತು. ಮತಿಹೀನನಾಗಿ ಕೇವಲ ಅಹಂಕಾರವನ್ನೇ ಪ್ರದರ್ಶಿಸುತ್ತಿದ್ದ ಮಂತ್ರಿ ಈಗ ಗಮನವಿಟ್ಟು ಆ ವ್ಯಕ್ತಿಯನ್ನು ಗಮನಿಸಿದ. ಅವನು ಕೇವಲ ಜಾದೂ ಮಾಡುವ ಯಕ್ಷಿಣಿಯವನಂತೆ ಕಾಣಲಿಲ್ಲ. ಅವನ ಕಣ್ಣಲ್ಲಿ ತೇಜಸ್ಸಿತ್ತು. ಋಷಿಯ ಸ್ವಭಾವವಿತ್ತು. ಅವನು ಸೃಷ್ಟಿಸಿದ ಬಿರುಗಾಳಿ, ಬೆಂಕಿ ಮತ್ತು ಜೀವಜಂತುಗಳಿಗೆ ಏನೋ ಅರ್ಥವಿದೆ ಎಂದು ಅವನಿಗೆ ಜ್ಞಾನೋದಯವಾಯಿತು. ತಕ್ಷಣ ಆ ಮನುಷ್ಯನ ಕಾಲಿಗೆ ಬಿದ್ದ ಮಂತ್ರಿ ಅರಮನೆಯನ್ನು, ತನ್ನ ರಾಜನನ್ನು ಕಾಪಾಡುವಂತೆ ಕೇಳಿಕೊಂಡ. ಆಗ ಆ ಮನುಷ್ಯ ಮಂತ್ರಿಯ ತಲೆಯ ಮೇಲೆ ಒಂದು ಏಟು ಕೊಟ್ಟು ಮತ್ತೆ ನಕ್ಕ. ಆಗ ಅವನ ಬಾಯಿಂದ ಮಾತನಾಡುವ ಗಿಳಿಯೊಂದು ಹೊರಬಂತು. ಅದು ಇವರು ಬಂದಿರುವುದು ನಿನ್ನ ಮತ್ತು ರಾಜನ ಕಷ್ಟ ಬಗೆಹರಿಸುವುದಕ್ಕೆ, ಪ್ರಜೆಗಳ ಮತ್ತು ಜೀವಜಂತುಗಳ ಕಷ್ಟ ಪರಿಹರಿಸುವುದಕ್ಕೆ ಎಂದು ಹೇಳಿ ಮಾಯವಾಯಿತು. ಮಂತ್ರಿಗೆ ಮತ್ತಷ್ಟು ಜ್ಞಾನೋದಯವಾಯಿತು. ಹೌದು ತಮ್ಮ ರಾಜ್ಯದಲ್ಲಿಯೂ ಪ್ರಜೆಗಳಿದ್ದಾರೆ ಎಂಬುದನ್ನು ಆಗ ನೆನಪಿಸಿಕೊಂಡ. ಮತ್ತೊಮ್ಮೆ ಕಾಲಿಗೆ ಬಿದ್ದು ಕ್ಷಮೆ ಯಾಚಿಸಿ ಅರಮನೆ ಒಳಗೆ ಬರುವಂತೆ ಬೇಡಿಕೊಂಡ. ಆ ಮನುಷ್ಯ ಅರಮನೆಯ ಒಳಗೆ ಹೋಗುತ್ತಿದ್ದಂತೆ ಅವನು ಸೃಷ್ಟಿಸಿದ್ದ ಬೆಂಕಿ ಉಂಡೆಗಳು ಅವನ ಒಡಲು ಸೇರಿದ್ದವು. ಅರಮನೆಯಲ್ಲಿ ಮತ್ತೆ ತಂಪಾದ ವಾತಾವರಣ ಸೃಷ್ಟಿಯಾಯಿತು.

ಆ ವಿಚಿತ್ರ ಮನುಷ್ಯನನ್ನು ಒಳಕರೆತಂದ ಮಂತ್ರಿ ಒಂದು ಚಿನ್ನದ ಕುರ್ಚಿಯ ಮೇಲೆ ಕೂರಿಸಿ